ಕೃಷಿ ವಿಶ್ವ ವಿದ್ಯಾನಿಲಯ

ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)

ಜಿ.ಕೆ.ವಿ.ಕೆ., ಬೆಂಗಳೂರು-560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 14.07.2020

# ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

## ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

(ದಿನಾಂಕ 15-07-2020 ರಿಂದ 19-07-2020 ವರೆಗೆ)

| ನಿಯತಾಂಕಗಳು | 15.07.2020 | 16.07.2020 | 17.07.2020 | 18.07.2020 | 19.07.2020 |
|---|---|---|---|---|---|
| ಮಳೆ (ಮಿ ಮಿ) | 8 | 4 | 2 | 1 | 27 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 30 | 30 | 31 | 31 | 30 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20 | 20 | 19 | 20 | 19 |
| ಮೋಡ ( ಪ್ರಮಾಣ) | 6 | 6 | 6 | 5 | 6 |
| ಅರ್ದ್ರತೆ 7.20 ಬೆ (ಶೇ) | 79 | 78 | 78 | 77 | 79 |
| ಅರ್ದ್ರತೆ 2.20 ಮ (ಶೇ) | 69 | 65 | 65 | 64 | 70 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 3 | 4 | 3 | 3 | 3 |
| ಗಾಳಿಯ ದಿಕ್ಕು ( ಡಿಗ್ರಿ) | 270 | 248 | 249 | 248 | 248 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 30.0-31.0$^{o}$ C ಮತ್ತು ಕನಿಷ್ಠ 19.0-20.0$^{o}$C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 77-79 % ಇದ್ದು ಮಧ್ಯಾಹ್ನ 64-70 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 3-4 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

## ವಾರದ ಮಳೆಯ ಮುನ್ಸೂಚನೆ ದಿನಾಂಕ 12-07-2020 ರಿಂದ 18-07-2020

| ರಾಜ್ಯ | ಪ್ರದೇಶ | ವಾಸ್ತವಿಕ ಮಳೆ (ಮಿ.ಮೀ) | ವಾಡಿಕೆ ಮಳೆ (ಮಿ.ಮೀ) | ಬದಲಾವಣೆ (ಪ್ರತಿಶತ %) |
|---|---|---|---|---|
| ಕರ್ನಾಟಕ | ದಕ್ಷಿಣ ಒಳನಾಡು | 3.2 | 3.4 | -4.6 |

## "ರೋಹಿಣಿ ರೂಪಾಯಿ, ಮೃಗಶಿರ ಮುಕ್ಕಾಲು, ಆರಿದ್ರ ಅರ್ಧ"

- ಪುನರ್ವಸು ನಕ್ಷತ್ರದ ಮಳೆಯ ಕಾಲವು ಜುಲೈ ತಿಂಗಳ 06 ರಿಂದ ಜುಲೈ 19 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 48.3 ಮಿ.ಮೀ. ವರೆಗೆ ಮಳೆಯಾಗುತ್ತದೆ.

## ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಕೋವಿಡ್-19 ವೈರಾನುವಿನ ನಿಯಂತ್ರಣಕ್ಕಾಗಿ ರೈತರು ವ್ಯಕ್ತಿಯಿಂದ ವ್ಯಕ್ತಿಗೆ 3-4 ಅಡಿಗಳ ಅಂತರವನ್ನು ವಿಶ್ರಾಂತಿ ಸಮಯದಲ್ಲಿ, ಆಹಾರ ಸೇವನೆಯ ಸಂದರ್ಭದಲ್ಲಿ, ಕೃಷಿ ಉತ್ಪನ್ನಗಳನ್ನು ಸಂಗ್ರಹಿಸುವಾಗ, ಇಳಿಸುವಾಗ/ಹೊತ್ತೊಯ್ದು ಅಡಕಿಸುವಾಗ ಹೀಗೆ ಪ್ರತಿ ಹಂತದಲ್ಲೂ ಸುರಕ್ಷಿತಾ ದೃಷ್ಟಿಯಿಂದ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಎಲ್ಲಾ ಕೃಷಿ ಪರಿಕಂಗಳ ಅಂಗಡಿಗಳು ತೆರೆದಿರುತ್ತವೆ. ಕೃಷಿಕರು ಈ ಅಂಗಡಿಗಳಲ್ಲಿ ಬೀಜ, ಗೊಬ್ಬರ ಮತ್ತು ರಾಸಾಯನಿಕಗಳನ್ನು ಕೊಳ್ಳುವಾಗ ಪರಸ್ಪರ 4 ಅಡಿಗಳ ಅಂತರವನ್ನು ಕಾಯ್ದುಕೊಳ್ಳಬೇಕು.<br>➢ ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ ಹೆಬ್ಬೇವು, ಸಿಲ್ವರ್ ಓಕ್ ಮತ್ತು ಸರ್ವೆ ಮರಗಳನ್ನು ನೆಡುವುದು ಸೂಕ್ತ.<br>➢ ಆರ್ದ್ರತೆ ಹೆಚ್ಚಿರುವುದರಿಂದ ಬಿತ್ತನೆ ಮಾಡಿರುವ ಬೆಳೆಗಳಲ್ಲಿ ಕೀಟ ಹಾಗೂ ರೋಗಗಳು ಹೆಚ್ಚಬಹುದು.ಆದುದರಿಂದ ಬೆಳೆಗಳನ್ನಾಧರಿಸಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು.<br>➢ ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ/ಸುತ್ತಲು ಮಾವು(ಮಲ್ಲಿಕ ಮತ್ತು ಬಾದಾಮಿ ಕಸಿ ಗಿಡ) ಬೆಳೆಯುವುದು ಸೂಕ್ತ. |

| | |
|---|---|
| | ➢ ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು ( ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.<br>➢ ಈಗಾಗಲೇ ಮೇ ಮತ್ತು ಜೂನ್ ತಿಂಗಳಲ್ಲಿ ಬಿತ್ತನೆ ಮಾಡಿರುವಂತಹ ದೀರ್ಘಾವಧಿ ಬೆಳೆಗಳಾದ ತೊಗರಿ, ಹರಳು ಬಿತ್ತನೆಯಾಗಿದ್ದಲ್ಲಿ ಮೇಲೆ ತಿಳಿಸಿರುವ ಬೇಸಾಯ ಕ್ರಮಗಳ ಜೊತೆಗೆ, ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ಸಿಗುವಂತಾಗಿ ಒಣಹವೆಯ ಅನಾನುಕೂಲತೆಯನ್ನು ಮುಂದೂಡಬಹುದು.<br>➢ ಕಿತ್ತಂತಹ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದ ಗಿಡ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ-ಹೊದಿಕೆಯಾಗಿ ಹರಡುವುದು<br>➢ ಇಳಿಜಾರಿಗೆ ಅಡ್ಡಲಾಗಿ ಉಳುಮೆಯನ್ನು ಮಾಡಿ ಇದರಿಂದ ಮಣ್ಣಿನ ಸವಕಳಿ ಕಡಿಮೆಯಾಗುತ್ತದೆ ಮತ್ತು ತೇವಾಂಶದ ಸಂರಕ್ಷಣೆಯಾಗುತ್ತದೆ.<br>➢ **ಏಕಬೆಳೆ ಪದ್ದತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ತೊಗರಿ : ಟಿ.ಟಿ.ಬಿ-7, ಬಿ.ಆರ್.ಜಿ-1,2,4ಮತ್ತು 5<br>ಮುಸುಕಿನ ಜೋಳ: ಗಂಗಾ-11, ಡೆಕ್ಕನ್-103, ವಿಜಯ ಕಾಂಪೋಸಿಟ್, ಕಾಂಪೋಸಿಟ್ ಎನ್.ಎ.ಸಿ-6004,6002, ನಿತ್ಯಶ್ರೀ-ಸಂಕರಣ ತಳಿ<br>➢ ತೊಗರಿ ಬಿತ್ತನೆಗೆ ಮುಂಚೆ ಬೀಜೋಪಚಾರ ಮಾಡುವುದು ಉತ್ತಮ, ಕಾರ್ಬನ್‌ಡೈಜಿಮ್ ಅಥವಾ ಥೈರಾಮ್ @ 2 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಉಪಚರಿಸಿ, ಮತ್ತು ಜೈವಿಕ ಕೀಟನಾಶಕಗಳಾದ ಟ್ರೈಕೋಡರ್ಮ ವಿರಿಡೆ @ 4 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಅಥವಾ ಸುಡೋಮೋನಾಸ್ ಫ್ಲುರೆಸೆನ್ಸ್ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಮತ್ತು ರೈಜೋಬಿಯಂ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಬೆರೆಸಿ ಉಪಚರಿಸಿ.<br>➢ **ಎರಡುಬೆಳೆ ಪದ್ದತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ನೆಲಗಡಲೆ: ಟಿ.ಎಂ.ವಿ-2, ಜೆ.ಎಲ್-24 ಮತ್ತು ಕೆ.ಸಿ.ಜಿ-6<br>ಅಲಸಂದೆ : ಟಿ.ವಿ.ಎಕ್ಸ್-944, ಕೆ.ಬಿ.ಸಿ-1<br>ಹೆಸರು :ಪಿ.ಎಸ್-16, ಪಿ.ಡಿ.ಎಮ್-84, 178 , ಉದ್ದು: ಕರಗಾವ್-3, ಟಿ-9, ರಶ್ಮಿ |
| **ಮಾವು** | ➢ ಸಸಿಗಳನ್ನು ನೆಡಲು ಜೂನ್-ಜುಲೈ ಅತ್ಯಂತ ಸೂಕ್ತ. ನೆಡುವ ಕಾಲಕ್ಕೆ ಗಿಡಗಳ ವಯಸ್ಸು ಒಂದು ವರ್ಷದಷ್ಟಿದ್ದರೆ ಉತ್ತಮ. ಅವುಗಳನ್ನು ಹೆಪ್ಪು ಸಮೇತ ನೆಡಬೇಕು. . ಪ್ರತಿ ಗುಂಡಿಯ ಮಧ್ಯೆ ಹೆಪ್ಪು ಹಿಡಿಸುವಷ್ಟೇ ಗಾತ್ರದ ತಗ್ಗು ತೆಗೆದು ಅದರಲ್ಲಿ ಗಿಡವನ್ನು ನೆಟ್ಟಗೆ ಇಳಿಸಿ ಬುಡದ ಸುತ್ತ ಹಸಿ ಮಣ್ಣನ್ನು ತಳ್ಳಿ, ಚೆನ್ನಾಗಿ ಅದುಮಿ ತುಳಿಯಬೇಕು. ಕಸಿ ಗಂಟು ನೆಲಮಟ್ಟದಿಂದ 15-20 ಸೆಂ.ಮೀ. ಎತ್ತರದರುವುದು ಅಗತ್ಯ. ಗಿಡಗಳಿಗೆ ಆಸರೆ ಕೋಲು ಸಿಕ್ಕಿಸಿ ಕಟ್ಟಿ, ಕೈ ನೀರು ಕೊಡಬೇಕು.<br>➢ ಗಿಡಗಳ ಸುತ್ತಲು ಪಾತಿ ಮಾಡಿ, ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಮಳೆಗಾಲ(ಜೂನ್-ಜುಲೈ) ದಲ್ಲಿ ಒದಗಿಸಬೇಕು.<br>➢ ಕಳೆ ನಿರ್ವಹಣೆಗೆ ಮತ್ತು ಭೂಮಿಯಲ್ಲಿನ ತೇವಾಂಶವನ್ನು ಸಂರಕ್ಷಿಸಲು ಅಂತರ ಬೇಸಾಯ ಮಾಡಬೇಕು.<br>➢ ಮಾವಿನಲ್ಲಿ ಒತ್ತಾಗಿ ಬೆಳೆದಿರುವ ರೆಂಬೆಗಳನ್ನು ಕತ್ತರಿಸಬೇಕು ಇದರಿಂದ ಸೂರ್ಯನ ಬೆಳಕು ಒಳಬಾಗಕ್ಕೆ ಬೀಳುತ್ತದೆ ಇದರಿಂದ ಒಳಭಾಗದಲ್ಲೂ ಮುಂದಿನ ಬಾರಿ ಹೂ ಮತ್ತು ಕಾಯಿ ಕಚ್ಚುತ್ತವೆ. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | ➢ **ಗಂಟಲು ಬೇನೆ:** ಪ್ರತಿ ವರ್ಷವೂ ಈ ರೋಗ ಮುಂಗಾರು ಮಳೆ ಪ್ರಾರಂಭದಲ್ಲಿ ( ಜೂನ್ ಮತ್ತು ಜುಲೈ) ಉಲ್ಬಣವಾಗುವುದರಿಂದ ಗಂಟಲು ಬೇನೆ ಲಸಿಕೆಯನ್ನು ಮೇ ತಿಂಗಳಿನಲ್ಲಿ ಮಾಡಿಸುವುದು.<br>➢ **ಚಪ್ಪೆ ರೋಗ :** ಈ ರೋಗವು ಬ್ಯಾಕ್ಟೀರಿಯಾದಿಂದ ಹರಡುತ್ತದೆ.<br>➢ ಈ ರೋಗವು ದನ, ಎಮ್ಮೆ, ಕುರಿಗಳಲ್ಲಿ ಹರಡುತ್ತದೆ. ಸಾಮಾನ್ಯವಾಗಿ ಈ ರೊಗವು ಮಳೆಗಾಲದ ಕೊನೆಯಲ್ಲಿ ಕಾಣುತ್ತದೆ. ಚಪ್ಪೆ ರೋಗದ ಲಸಿಕೆಯನ್ನು ಪ್ರತಿ ವರ್ಷವೂ ಜೂನ್/ಜುಲೈ ತಿಂಗಳಲ್ಲಿ ಮಾಡಿಸುವುದು.<br>➢ ಕೊಟ್ಟಿಗೆಯ ಉದ್ದವಾದ ಭಾಗ ಪೂರ್ವ-ಪಶ್ಚಿಮ ದಿಕ್ಕಿನಲ್ಲಿದ್ದು, ಸಾಕಷ್ಟು ಸೂರ್ಯನ ಬೆಳಕು ಕೊಟ್ಟಿಗೆಯೊಳಗೆ ಬೀಳುವಂತಿರಬೇಕು.ಇದು ಕೊಟ್ಟಿಗೆಯ ಒಳಗಿನ ನೆಲ ಒಣಗಲು ಸಹಾಯವಾಗುತ್ತದೆ ಮತ್ತು ಹಲವಾರು ರೋಗಗಳಿಗೆ ಕಾರಣವಾಗುವ ಸೂಕ್ಷ್ಮಾಣು ಜೀವಿಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. |
| **ರೇಷ್ಮೆ ಸಾಕಾಣೆ** | **ಹಾಲು ತೊಂಡೆ ರೋಗ:** ಈ ರೋಗವು ಒಂದು ಪ್ರಮುಖ ಬಹುಮುಖಿ ನಂಜಾಣು (ಪಾಲಿಹೆಡ್ರಾ ವೈರಾಣು)ಗಳಿಂದ ಉಂಟಾಗುತ್ತವೆ. ಇದು ಪ್ರಮುಖವಾಗಿ ಬೇಸಿಗೆ ಮತ್ತು ಮಳೆಗಾಲದಲ್ಲಿ ಕಾಣಿಸಿಕೊಳ್ಳುತ್ತವೆ.<br>**ರೋಗ ನಿಯಂತ್ರಣ:**<br>➢ ಸೋಂಕು ನಿವಾರಣೆಯನ್ನು ಸಮರ್ಪಕವಾಗಿ ಈಗಾಗಲೇ ತಿಳಿಸಿರುವ ಹಾಗೆ ನಿರ್ಧಾರಿತ ಪ್ರಮಾಣದಲ್ಲಿ ನಿರ್ವಹಿಸಬೇಕು. ತೀವ್ರತೆ ಅಧಿಕವಾಗಿದ್ದಲ್ಲಿ ಶೇ.0.5-1.0 ರ ಸುಣ್ಣದ ತಿಳಿ ನೀರನ್ನು ಸೋಂಕು ನಿವಾರಕಗಳಿಗೆ |

| | |
|---|---|
| | ಬೆರೆಸಿ ಸಿಂಪಡಿಸಬೇಕು.<br>➢ ಹುಳು ಸಾಕಣಿಕಾ ಸಮಯದಲ್ಲಿ ಶುಚಿತ್ವ ಕಾಪಾಡಿಕೊಂಡು ರೋಗಪೀಡಿತ ಹುಳುಗಳನ್ನು ಆದಷ್ಟು ಬೇಗ ಬೇರ್ಪಡಿಸಿ ನಾಶಗೊಳಿಸಬೇಕು.<br>➢ ಹಾಸಿಗೆ ಸೋಂಕು ನಿವಾರಕಗಳಾದ ಸಂಜೀವಿನಿ, ವಿಜೇತ, ವಿಜೇತ ಗ್ರೀನ್, ವಿಜೇತ ಸಪ್ಲಿಮೆಂಟ್, ರೇಷಂಜ್ಯೋತಿ ಇತರೆ ಶಿಫಾರಸ್ಸು ಮಾಡಿದ ಪುಡಿಗಳನ್ನು ಸಿಂಪಡಿಸಬೇಕು.<br>➢ ಹುಳು ಸಾಕಾಣಿಕಾ ಸಮಯದಲ್ಲಿ ಉಷ್ಣಾಂಶ ಮತ್ತು ಶೈತ್ಯಾಂಶ , ಸೊಪ್ಪಿನ ಗುಣಮಟ್ಟ, ಸ್ಥಳಾವಕಾಶ ಆಯಾ ಹಂತದ ಅಗತ್ಯಕ್ಕೆ ಇರುವಂತೆ ನೋಡಿಕೊಳ್ಳತ್ತಕ್ಕದ್ದು.<br>➢ ಔಷದಿ ಸಿಂಪಡಿಸಿದ 10 ರಿಂದ 12 ದಿನಗಳು ಕಳೆದ ಮೇಲೆ ಇಪ್ಪುನೇರಳೆ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ಹಾಕುವುದು ಸೂಕ್ತ. ಇಲ್ಲವಾದರೆ ಕೀಟನಾಶಕವು ಹುಳುವಿನಲ್ಲಿ ಸೇರಿ ರೋಗವು ಹೆಚ್ಚಾಗುತ್ತದೆ. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**